Indian Journal Of History and Archaeology

INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,82-90
Peer Reviewed Journal, Referred Journal

IJHA JOURNALS www.IJHA.IN

# ಕಾರ್ಪೋರೆಟ್ ಜಗತ್ತಿನಲ್ಲಿ ಮಹಿಳಾ ಬದುಕಿನ ಚಿತ್ರಣ

**ಮಂಜುಳಾ.ಬಿ.ಆರ್..**[1]

19ನೇ ಶತಮಾನವು ಜಗತ್ತಿ ಮತ್ತು ಪ್ರಧಾನವಾಗಿ ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವಂತಹ ಮಹಿಳೆಯರ ಇತಿಹಾಸವನ್ನು ಬದಲಿಸುವ ಬಿಡುಗಡೆಯ ಹಾದಿಗಳು ಸೃಷ್ಟಿಗೊಂಡಿದ್ದವು. ಏಕೆಂದರೆ, ಇದರ ಹಿಂದಿನ ದಿನಮಾನಗಳು ಅಷ್ಟೇನು ಆಶದಾಯಕವಾಗಿರಲ್ಲಿಲ್ಲ. ಬದಲಿಗೆ ಪ'ರಂಪ'ರಗತವಾಗಿ ಇಲ್ಲಿನ  ಅಸಮಾನತೆಯ ಮನಸ್ಸಿನ ಪೂರ್ವಜರಿಂದಲೇ ಸಂಪೂರ್ಣ ಸ್ವತಂತ್ರವನ್ನು ಕಳೆದುಕೊಂಡು ಮಾತೃ ವ್ಯವಸ್ಥೆಯಲ್ಲಿ ಬದುಕುತ್ತಿದ್ದಂತಹ ಮಹಿಳೆಯರು ಪುರುಷರ ಕೈಗೊಂಬೆಗಳೇ ಆಗಿದ್ದಾರೆ ಎಂಬುದನ್ನು ಇಂದಿಗೂ ಕೂಡ ಗುರುತಿಸಬಹುದು. ಭಾರತೀಯ ಸಂದರ್ಭದ ಪುರುಷ ಪ್ರಧಾನ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಚರಣೆಗಳು ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯೆ ಇರಿಸಿ ತನ್ನ ಕಾರ್ಯಭಾರವನ್ನು ನಿರ್ವಹಿಸುತ್ತ ಬಂದಿದ್ದಾರೆ. ಬಹುಹಿಂದಿನಿಂದಲೂ ಮಹಿಳೆಯೂ ಒಂದು ಭೋಗದ ವಸ್ತುವಾಗಿಯೇ ಪರಿಗಣಿಸುತ್ತ ಬಂದಿರುವುದು ಪ್ರತಿಯೊಬ್ಬರಿಗೂ ತಿಳಿದಿರುವ ನೈಜಾ ವಿಷಯವೇ ಆಗಿದೆ. ಮಹಿಳೆಯನ್ನು ದೈವಿಕ ಶಕ್ತಿಯ ಸ್ವರೂಪಿಣಿಯಾಗಿ ಬಿಂಬಿಸಿ ಮನುಷ್ಯಳಾಗಿ ಬದುಕುವ ಸ್ವತಂತ್ರ್ಯವನ್ನು ಕಸಿದುಕೊಂಡರು. ಅವಳು ಅಬಲೆ, ಸ್ವತಂತ್ರ್ಯಕ್ಕೆ ಅರ್ಹಳಲ್ಲ ಎಂದು ಹುಟ್ಟಿನಿಂದ ಸಾಯುವವರೆಗೂ ಪುರುಷರ ಅಧೀನದಲ್ಲಿಯೆ ಒಂದಲ್ಲ ಒಂದೂ ಕಾರಣಕ್ಕೆ ಇರಬೇಕೆಂಬ ಅಲಿಖಿತವಾಗಿರುವಂತಹ ನಿಯಮವನ್ನು ಕೂಡ ಮಾಡಿದ್ದರು.

ಬದುಕಿನಲ್ಲಿ ಒಬ್ಬ ಮಹಿಳೆಯು ತನ್ನ ಗಂಡ, ಮಕ್ಕಳು, ಆಭರಣಗಳಲ್ಲಷ್ಟೇ ತೃಪ್ತಿಯನ್ನು ಕಾಣುತ್ತ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಶೂದ್ರಳಲ್ಲಿ ಶೂದ್ರಳಾಗಿ ಗೃಹ ಜೀವನದಲ್ಲಿ ಸಂಪೂರ್ಣವಾಗಿ ದಾಸಿಯಾಗಿಯೇ ತನ್ನ ವೈಯುಕ್ತಿಕ ವಾಸ್ತವದ ಜೀವನದಿಂದ ಬಹುದೂರ ಉಳಿಯುವುದು ಅನಿವಾರ್ಯ ಆವಾಗಿತ್ತೇನೋ, ಮನೆಯಲ್ಲಿ ಆಕೆಯೂ ಒಂದು ಭೋಗದ ವಸ್ತುವೆಂಬಂತೆ ಇದ್ದು, ಶಿಕ್ಷಣದ ಸೋಂಕಿಲ್ಲದೇ ತನ್ನ ತನದ ಅರಿವಿಲ್ಲದೇ ಸ್ವಂತ ವ್ಯಕ್ತಿತ್ವವೇ ಇಲ್ಲದಂತೆ ಬದುಕುತ್ತಿದ್ದ ಅವಳಿಗೆ ಜಾಗೃತಿಯನ್ನುಂಟು ಮಾಡುವುದು ಅವಶ್ಯಕವಿತ್ತು. ಆದರೆ ಅದು ಅಷ್ಟು ಸುಲಭ

1. **ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು**

ಸಾಧ್ಯವಾಗಿರಲಿಲ್ಲವೆಂಬುದು ತಿಳಿದಿರುವ ವಿಷಯವೇ ಆಗಿದೆ. ಇಂತಹ ಕಾಲ ಸಂದರ್ಭದಲ್ಲಿ ಅವರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ನಡೆದ ಪ್ರಮುಖ ಪ್ರಯತ್ನಗಳೆಂದರೆ; ಆಧುನಿಕ ಶಿಕ್ಷಣ ಜಾರಿಗೆ ಬಂದದ್ದು. ಇದು ಮಹಿಳಾ ಶಿಕ್ಷಣದ ಬೆಳವಣಿಗೆಯಲ್ಲಿ ಸಮಾಜ ಸುಧಾರಕರ ಕಾರ್ಯಗಳು ಬ್ರಿಟಿಷ್ ಶಿಕ್ಷಣ ನೀತಿಗಳು ಜೊತೆ ಜೊತೆಗೆಯೇ ಕ್ರಿಶ್ಚಿಯನ್ ಮಿಷನರಿಗಳು ಕೂಡ ಇದಕ್ಕೆ ಬಹುಪ್ರಮುಖ ಪಾತ್ರವಹಿಸಿದ್ದವು ಎಂದು ಹೇಳಬಹುದು. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸುವುದರ ಜೊತೆಗೆ ಮಹಿಳೆಯರಿಗೆ ಶಿಕ್ಷಣ ನೀಡಿದರೆ ಮಾತ್ರ ಮಹಿಳೆಯರ ಮತ್ತು ಸಮಾಜವು ಉದ್ಧಾರವಾಗಲೂ ಸಾಧ್ಯ ಎಂಬುದನ್ನು ಕಂಡುಕೊಂಡ ಮಹಾತ್ಮ ಜ್ಯೋತಿಬಾ ಫುಲೆ ದಂಪತಿಗಳು, ರಾಜರಾಮ್ ಮೋಹನ್ ರಾಯ್, ಮಹಾತ್ಮ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಂತಹ ಅನೇಕ ಸಮಾಜ ಸುಧಾರಕರು ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು ಎಂಬುದನ್ನು ಗುರುತಿಸಬಹುದು.

ವಸಹತುಶಾಹಿ ಆಡಳಿತದ ಪರಿಣಾಮ ಸಾರ್ವಜನಿಕ ಇಂಗ್ಲಿಷ್ ಶಿಕ್ಷಣ ವಿದ್ಯಾಭ್ಯಾಸ ಜಾರಿಗೆ ಬಂದಾಗ ಅದು ಹೆಣ್ಣು ಮಕ್ಕಳಿಗೂ ದೊರೆಯುವಂತಾದದ್ದು ಸುಕೃತವೇ ಸರಿ. ಸ್ತ್ರೀಯರ ಶಿಕ್ಷಣಕ್ಕೆ ಹಲವು ಹತ್ತು ಹೋರಾಟಗಳು, ಸುಧಾರಣೆಗಳು ನಡೆದವು. ಆರ್ಯ ಸಮಾಜ, ಬ್ರಹ್ಮ ಸಮಾಜ ಸ್ಥಾಪನೆಗೊಂಡು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ ಅನಂತರ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡರು. ರಾಜರುಗಳ ಆಡಳಿತಾ ವರ್ಗದ ಹೆಣ್ಣು ಮಕ್ಕಳ ಶಿಕ್ಷಣ ಪಡೆದ ನಂತರದಲ್ಲಿ ಸಾಮಾನ್ಯ ಮಹಿಳೆಯು ಕೂಡ ಪಡೆಯುವಂತಾಗಿ ಇಂದು ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪು ಮೂಡಿಸಿರುವುದು ಕಂಡುಬರುತ್ತದೆ. ಶಿಕ್ಷಣದಿಂದಾಗಿ ಮಹಿಳೆಯರು ಸ್ವಾಭಿಮಾನಿಗಳಾಗಿ ಆತ್ಮವಿಶ್ವಾಸದಿಂದ ಆರ್ಥಿಕ ಸ್ವಾವಲಂಬನೆ ಪಡೆದು ಜೀವನ ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಆಧುನಿಕ ಶಿಕ್ಷಣವು ಸಮಾಜದಲ್ಲಿ ಲಿಂಗ ತಾರತಮ್ಯ ಅಸಮಾನತೆಯನ್ನು ತೊಡೆದು ಹಾಕುವುದಕ್ಕೆ ದಾರಿ ದೀಪವಾಯಿತು. ಇದರಿಂದಾಗಿ ಮಹಿಳೆಯರೆಲ್ಲ ಆತ್ಮವಿಶ್ವಾಸದಿಂದ ಅಭಿವ್ಯಕ್ತಿ ಸ್ವತಂತ್ರ ಪಡೆದು ಸಕಾರಾತ್ಮಕ ಆಲೋಚನೆಯ ಮೂಲಕ ತಮ್ಮ ಬದುಕನ್ನು ಸುಗಮ ಮಾಡಿಕೊಂಡಿದ್ದಾರೆ. ಆದರೂ ಕೂಡ ಸಾಮಾಜಿಕ ಸಮಸ್ಯೆಗಳೊಂದಿಗೆ ಈ ವ್ಯವಹಾರಿಕ ಜಗತ್ತಿನ ಶೈಕ್ಷಣಿಕ, ಔದ್ಯೋಗಿಕ ಕೌಟುಂಬಿಕ ಬದುಕು ಸಮಸ್ಯೆಗಳೊಂದಿಗೆ ಸಾಮರಸ್ಯದ ಬದುಕು ನಡೆಸುತ್ತಿದ್ದಾಳೆ ಎಂಬುದನ್ನು ಗಮನಿಸಬಹುದಾಗಿದೆ.

ಪೋಷಕರು ತಮ್ಮ ಮಗನಿಗೆ ಸಾಲ ಸೋಲಾ ಮಾಡಿಯಾದರು ಮೆಡಿಕಲ್ ಮಾಡಿಸುತ್ತಾರೆ ಅವನು ಉದ್ಯೋಗಕ್ಕೆಂದು ವಿದೇಶಕ್ಕೆ ತೆರಳುತ್ತಾನೆ. ತನ್ನ ಮನೆಯವರ ನಿರ್ಲಕ್ಷ್ಯಕ್ಕೆ ಒಳಗಾಗಿ ಕಲಾ ವಿಭಾಗದಲ್ಲಿ ಓದಿ ಪ್ರಾಧ್ಯಾಪಕಿಯಾಗಿ ಜೀವನ ನಡೆಸುವ ವಿಜೂ ತಂದೆ ತಾಯಿಯರ ಯೋಗಕ್ಷೇಮವನ್ನು ಕೊನೆಗಾಲದಲ್ಲಿ ಅವರ ಅಂತ್ಯಸಂಸ್ಕಾರವನ್ನು ಅವಳೇ ಮಾಡುವುದು ಮಗಳೇ ಆದರೆ ವಂಶೋದ್ಧಾರಕನೆಂಬ ಪೋಷಕ ಮುದ್ದಿನ ಕಣ್ಮಣಿಯಾದ ಮಗ ಅವರ ಯಾವ

ಜವಾಬ್ದಾರಿಯನ್ನು ತೆಗೆದುಕೊಳ್ಳದೇ ತನ್ನ ಜೀವನವನ್ನು ಮಾತ್ರ ಆಲೋಚಿಸುವುದನ್ನು ನೇಮಿಚಂದ್ರರ ಇತ್ತೀಚಿನ ಕಥೆಗಳಲ್ಲಿ ಒಂದಾದ 'ನೆನ್ನೆಗಳ ಹೊರೆ ಇಳಿಸಿ' ಕಥೆಯಲ್ಲಿ ಕಂಡು ಬರುತ್ತದೆ. ಇದು ಇಂದು ಮಹಿಳೆ ಎಂತಹ ಸಮಸ್ಯೆಯ ಸಂಕಷ್ಟದ ಸಂದರ್ಭದಲ್ಲಿಯೂ ಕರುಣಾಮಯಿಯಾಗಿ ವ್ಯವಹರಿಸಿ ಮಾಂತ್ರಿಕ ಜಗತ್ತಿನಲ್ಲಿ ಯಾಂತ್ರಿಕ ಬದುಕ ನಡೆಸದೇ ತನ್ನ ತನವನ್ನು ಇನ್ನು ಬೆಳೆಸಿಕೊಂಡಿರುವುದು ಕಂಡುಬರುತ್ತದೆ.

ವಿದ್ಯೆ ಕಲಿತ ಹೆಣ್ಣು ವಿವೇಚನಾ ಸಹಿತವಾಗಿ ಆಲೋಚಿಸಿ ತನಗೆ ಏನು ಬೇಕು ಬೇಡಗಳ ನಿರ್ಣಯವನ್ನು ತೆಗೆದುಕೊಳ್ಳುವುದರೊಂದಿಗೆ ತಾನು ಕೂಡ ಎಲ್ಲರಂತೆ ಸ್ವಾವಲಂಬಿಯಾಗಿ ಬದುಕಬೇಕು ಹಾಗೆ ಸಮಾಜದಲ್ಲಿ ಮತ್ತು ಕುಟುಂಬದಲ್ಲಿ ಆಗುವಂತಹ ತಪ್ಪು ನಿರ್ಣಯಗಳಿಗೆ ಸಮಸ್ಯೆಗಳಿಗೆ ಪರಿಹಾರ ಹೇಗೆ ಕಂಡುಕೊಂಡು ಸುಖಜೀವನವನ್ನು ತನ್ನ ಇಚ್ಛೆಯಂತೆ ಕಟ್ಟಿಕೊಳ್ಳಬೇಕು ಎಂಬುದನ್ನು ಶಾಂತಾದೇವಿ ಕಣವಿ ಅವರ 'ಬೆಳಗು ಬೈಗಿನಾಟ' ಎಂಬ ಕಥೆಯಲ್ಲಿ ಕಟ್ಟಿಕೊಡುತ್ತಾರೆ. ನನಗೆ ಈಗ ಮದುವೆ ಬ್ಯಾಡ, ನಾ ಇನ್ನು ಮುಂದೆ ಎಂ.ಬಿ.ಎ ಓದಬೇಕು ನೌಕರಿ ಹಿಡಿದು ಆರ್ಥಿಕವಾಗಿ ಸ್ವತಂತ್ರಯ ಆಗಬೇಕು' ಎಂದು ರಾಜಿ ಹೇಳುತ್ತಾಳೆ. ಇದು ಮಹಿಳೆಯ ದಿಟ್ಟ ನಿರ್ಧಾರ ಮತ್ತೇ ಧೈರ್ಯವನ್ನು ತಿಳಿಸುತ್ತಿದೆ.

ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಮಹಿಳೆಯರ ಹಿತಾಸಕ್ತಿಯನ್ನು ತಮ್ಮ ಅನುಕೂಲಕ್ಕನುಗುಣವಾಗಿ ಅಧಿಕಾರದ ವ್ಯವಸ್ಥೆಯನ್ನಾಗಿ ರೂಪಿಸಿಕೊಂಡಿದ್ದಾರೆ. ಸಮಾಜದಲ್ಲಿ ಕುಟುಂಬದ ಅಧಿಕಾರದ ಸಂಬಂಧಗಳು ಬೇರೆ ಬೇರೆ ರೀತಿಯಲ್ಲಿದ್ದರೂ ಕೂಡ ಅದರೊಳಗೆ ಬಹುರೂಪದ ಸಂಬಂಧಗಳು ಕಂಡುಬರುತ್ತವೆ. ಅಂದರೆ, ಲಿಂಗಾಧಾರಿತ ಆಧಾರದ ಮೇಲೆ ದುಡಿಯುವ ವಲಯಗಳು ಸ್ತ್ರೀ ಪುರುಷರಿಗೆಂದೇ ವಿಭಾಗ ಮಾಡಿದಂತ್ತಿರುತ್ತದೆ. ಆದರೆ ಇಂದು ಅದು ವಿರಳವಾಗಿದೆ. ದುಡಿಮೆಯ ಶ್ರಮಕ್ಕೆ ಬೆಲೆ ಕಟ್ಟುವ ಮಾನದಂಡಗಳು ಬೇರೆಯಾಗಿರುವುದು ಕಂಡುಬರುತ್ತದೆ.

ವ್ಯವಹಾರಿಕ ಜಗತ್ತಿನಲ್ಲಿ ಉದ್ಯೋಗ ಮಾಡುತ್ತಿರುವ ಮಹಿಳೆಯರು ಕೌಟುಂಬಿಕ ಜವಾಬ್ದಾರಿಗಳಿಗೂ ಮತ್ತೊಂದೆಡೆ ದುಡಿಯುವ ಜಗತ್ತಿನಡೆಗೂ ಬದ್ಧರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಇದು ಅನಿವಾರ್ಯವು ಆಗಿರುತ್ತದೆ. ಆದರೆ ವಾಣಿಜ್ಯೋಧ್ಯಮದ ಮಾರುಕಟ್ಟೆಗಳನ್ನು ಕಟ್ಟಿಬೆಳೆಸುವ ಪುರುಷರಿಗೆ ತಾಯ್ತನದ ಹೊರೆಯಾಗಲಿ ಮಕ್ಕಳ ಪೋಷಣೆಯ ಜವಾಬ್ದಾರಿಗಳಾಗಲಿ ಇರುವುದಿಲ್ಲ. ಆದರೆ ಕೆಲವೊಮ್ಮೆ ಹೆಂಡತಿ ಮಕ್ಕಳು ಅನಾರೋಗ್ಯದಲ್ಲಿ ನರಳಿ ಸಾಯುತ್ತಿದ್ದರೂ ಅವರ ಯೋಗಕ್ಷೇಮ ನೋಡಿಕೊಳ್ಳಲು ಸಾಧ್ಯವಾಗದಿರುವಂತಹ ಸಂದರ್ಭಗಳಿರುವುದು ಕಂಡುಬರುತ್ತದೆ. ಇನ್ನು ಕೆಲವು ಪುರುಷರು ಉದ್ಯೋಗದ ನಿಮಿತ್ತ ತನ್ನ ಜವಾಬ್ದಾರಿಯನ್ನು ಮರೆತಂತೆ ಅದರಲ್ಲಿಯೇ ತಲ್ಲಿನರಾಗಿ ಕಾಲಕಳೆಯುವುದು ಕಂಡುಬರುತ್ತದೆ. ಇಂತಹ ಸಂದರ್ಭವು ನೇಮಿಚಂದ್ರ ಅವರ 'ಬದುಕು ಕಾಯುವುದಿಲ್ಲ' ಎಂಬ ಕಥೆಯ ಮೂಲಕ ತಿಳಿಸಿದ್ದಾರೆ.

ಸಂಯುಕ್ತ ಮತ್ತು ವಿಸ್ಮಯ ಇಬ್ಬರು ಕಂಪನಿಯಲ್ಲಿ ಕೆಲಸ ಮಾಡುತ್ತ ಸುಖಿ ದಾಂಪತ್ಯ ಜೀವನ ನಡಸುತ್ತಿರುತ್ತಾರೆ. ಒಮ್ಮೆ ಅವರ ಮಗು ಮುನ್ನನಿಗೆ ಜ್ವರ ಬಂದಾಗ ಅದನ್ನು ನೋಡಿಕೊಳ್ಳುವುದಕ್ಕೆ ಇಬ್ಬರಿಗೂ ಆಫಿಸಿಗೆ ರಜೆ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಗಂಡನಿಗೆ ರಜೆ ಹಾಕುವ ಸಂದರ್ಭವಿದ್ದರೂ ಅದನ್ನು ಬಳಸಿಕೊಳ್ಳದೇ ಆಫೀಸಿಗೆ ಹೊರಡುತ್ತಾನೆ. ಅವಳಿಗೆ ಕಠಿಣ ಪರಿಸ್ಥಿತಿ. ಕೆಲಸಕ್ಕೆ ಹೋಗಲೇ ಬೇಕಾಗಿರುತ್ತದೆ. ಆಗ ಪಕ್ಕದ ಮನೆಯ ಗೆಳತಿ ಶಶಿಕಲಾ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರೂ ಅವರು ರಜೆ ಹಾಕಿ ಮಗುವಿನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಇದು ಎಂತಹ ವಿವಾಹ ದಾಂಪತ್ಯದ ಬದುಕು ಎಂದೆನಿಸುತ್ತದೆ. ತಮ್ಮವರ ಕಷ್ಟಕ್ಕೆ ಸ್ಪಂದಿಸಲಾಗದಂತಹ ಕೆಲಸದ ಒತ್ತಡದ ಜೀವನವು ಇಂದು ಸಾಗುತ್ತಿದೆ ಎಂಬುದು ತಿಳಿದುಬರುತ್ತದೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಪುರುಷನಿಗೆ ಉದ್ಯೋಗವೇ ಲಕ್ಷಣ, ಭೂಷಣ ಎಂದು ಹೇಳುತ್ತ ಸ್ತ್ರೀಯರಿಗೆ ಔದ್ಯೋಗಿಕ ಕ್ಷೇತ್ರವನ್ನೇ ನಿರಾಕರಿಸಿದಂತಿತ್ತು. ಆದರೆ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಯದಲ್ಲಿ ಮಹಿಳೆಯರು ಶತಶತಮಾನಗಳಿಂದ ದುಡಿಯುತ್ತಿದ್ದರೂ ಅದಕ್ಕೆ ಬೆಲೆ ಇಲ್ಲದೆ ಬದುಕು ಸಾಗಿಸುತ್ತಿದ್ದರು ಎಂಬುದು ನಮಗೆ ತಿಳಿದಿರುವ ವಿಷಯವೇ ಆಗಿದೆ. ಆದರೆ ಇಂದು ಅದು ಬದಲಾಗಿದೆ 'ಉದ್ಯೋಗಂ ಮನುಷ್ಯ ಲಕ್ಷಣಂ' ಎಂದಾಗಿ ಬದಲಾಯಿಸಲಾಗಿದೆ. ಅದು ಮನುಷ್ಯನಿಗೆ ಅಗತ್ಯವಾದದ್ದು. ಮಹಿಳೆಗೂ ಅತಿ ಮುಖ್ಯವಾದದ್ದು ಎಂಬುದನ್ನು ಅರಿಯಬೇಕಾಗಿದೆ.

ಮಹಿಳೆ ವಿದ್ಯಾವಂತಳಾದಂತೆಯೇ ನಗರದಲ್ಲಿ ಮಹಿಳೆಯರ ಉದ್ಯೋಗದ ಅವಕಾಶಗಳು ಹೆಚ್ಚಾಗತೊಡಗಿದವು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಸಮಾನ ಉದ್ಯೋಗಾವಕಾಶಗಳನ್ನು ಕಲ್ಪಿಸುವುದರ ಮೂಲಕ ಮಹಿಳೆಯರು ಸ್ವಾವಲಂಬಿಯಾಗಿ ಆರ್ಥಿಕವಾಗಿ ಸಬಲರಾಗಿ ಬದುಕುವಂತೆ ಮಾಡಿದೆ. ತನ್ನ ಮೇಲೆ ಏರಲ್ಪಟ್ಟಿದ್ದ ಎಲ್ಲಾ ಪುರುಷಾಧಿಕಾರದ ಕಟ್ಟುಕಟ್ಟಳೆಗಳನ್ನು ಬಿಡಿಸಿಕೊಂಡು ಸ್ವತಂತ್ರಳಾಗತೊಡಗಿದಳು. ಆದರೆ ಕೆಲವೊಮ್ಮೆ ಕೆಲಸದ ಸಮಯದಲ್ಲಿ ನಡೆಯುವ ಶೋಷಣೆ. ದೌರ್ಜನ್ಯಗಳು ಘಟಿಸದೇ ಇರಲಾರದು. ಅದನ್ನು ಅವಳು ಪ್ರತಿಭಟಿಸಿ ಮುನ್ನಡೆಯುತ್ತ ಬದುಕುತ್ತಿದ್ದಳೆ. ಔದ್ಯೋಗಿಕ ಕ್ಷೇತ್ರಕ್ಕೆ ಕಾಲಿಟ್ಟ ಹೆಣ್ಣು ತನ್ನ ಸಾಂಸಾರಿಕ ಜೀವನದ ನಿರ್ವಹಣೆಯ ಜವಾಬ್ದಾರಿಯನ್ನು ಕೂಡ ಹೊತ್ತು ಕಂಪನಿ, ಆಫೀಸ್, ಶಾಲೆ, ಕಾಲೇಜು ಇನ್ನಿತರ ಸ್ಥಳಗಳಲ್ಲಿ ದುಡಿದು ಕುಟುಂಬಕ್ಕೆ ಆಧಾರವಾಗುತ್ತಿದ್ದಾಳೆ. ಹಾಗೆ ಪುರುಷಾಧಿಕಾರದ ಒತ್ತಡಕ್ಕೂ ಒಳಗಾಗುತ್ತಿದ್ದಾಳೆ. ದುಡಿಯುವ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳು ತನ್ನ ಮನೆಯಿಂದ ಪ್ರಾರಂಭವಾಗಿ ಕಛೇರಿಯವರೆಗೆ ಸಾಲುಗಟ್ಟಿ ನಿಂತಿರುತ್ತದೆ. ಅದು ಗ್ರಾಮ ನಗರಗಳನ್ನದೇ ಸಮಸ್ಯೆಗಳು ನಾನಾ ರೀತಿಯಿಂದ ಎದುರಾಗುತ್ತಿರುವುದನ್ನು ಕಾಣುತ್ತೇವೆ.

ಬಂಡವಾಳಶಾಹಿ ವ್ಯವಸ್ಥೆಯ ಆಗಮನದಿಂದಾಗಿ ಉತ್ಪಾದಕರ ವ್ಯವಸ್ಥೆಯಲ್ಲಿಯೂ ಮಹಿಳೆಗೆ ಮುಕ್ತ ಅವಕಾಶ ಮಾಡಿಕೊಟ್ಟ ಆಕೆಯ ಬದುಕಿನ್ಲಲಿ ಕ್ರಾಂತಿಕಾರಕ ಬದಲಾವಣೆಯನ್ನು ತಂದಿದೆ. ಆದರೂ ಕೂಡ ಹೆಣ್ಣು ಎರಡನೇ ದರ್ಜೆಯ ಪ್ರಜೆಯಾಗಿಯೇ ಬದುಕುತ್ತಿದ್ದಾಳೆ. ವ್ಯವಹಾರಿಕ ಜಗತ್ತಿನಲ್ಲಿ ಎಲ್ಲವನ್ನು ಸರಕನ್ನಾಗಿ ನೋಡುವ ದೃಷ್ಟಿಕೋನ ಹೆಣ್ಣಿನ ದೇಹವನ್ನು ಕೂಡ ಮಾರುಕಟ್ಟೆಯ ಮೌಲ್ಯದಲ್ಲಿ ಅಳೆಯುವಂತಹ ವ್ಯವಸ್ಥೆಯಲ್ಲಿ ಆಘಾತ್ಕಕೆ ಒಳಗಾಗಿ ಸ್ವಯಂ ನಿಯಂತ್ರಣ ಕಳೆದುಕೊಂಡು ಆತ್ಮಹತ್ಯೆಯ ಪ್ರಯತ್ನ ಆಲೋಚಿಸಿ ನಂತರ ತನ್ನ ಕುಟುಂಬಕ್ಕಾಗಿ ಬೌದ್ಧಿಕವಾಗಿ ಆಲೋಚಿಸಿ ಅದರಿಂದ ಹೊರನಡೆದ ಉದ್ಯೋಗಸ್ಥ ಸ್ತ್ರೀಯ ಸಮಸ್ಯೆಯನ್ನು 'ವರ್ಗದದ್ದಾಯಿತು'. ಕಥೆಯಲ್ಲಿ ಶಾಂತಾದೇವಿ ಕಣವಿಯವರು ಕಥೆಯಲ್ಲಿ ತಿಳಿಸಿದ್ದಾರೆ.

ಮಹಿಳೆಯನ್ನು ದೇಹ ಮಾತ್ರವಾಗಿಸಿದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತನಗಾಗಿ ಏನನ್ನಾದರೂ ಪಡೆದುಕೊಳ್ಳಬೇಕಾದರೆ ಅವಳ ದೇಹವನ್ನು ಸರಕಿನಂತೆ ಮಾರಾಟ ಮಾಡಬೇಕಾದ ದುರಂತ ವ್ಯವಸ್ಥೆ ಇರುವುದು ಕಂಡುಬರುತ್ತದೆ. ದಂಪತಿಗಳಿಬ್ಬರು ಉದ್ಯೋಗದಲ್ಲಿದ್ದರೂ ಹೆಚ್ಚಾಗಿ ಸಮಸ್ಯೆ ಸವಾಲಿನೊಂದಿಗೆ ಹೋರಾಟ ಮಾಡುವುದು ಹೆಣ್ಣು ಮಾತ್ರ. ದೇಹ ಸಂಬಂಧ ಮೂಲದಿಂದ ಮನೋಸಂಬಂಧಿ ನೆಲೆಗೆ ತನ್ನ ಪಾವಿತ್ರ್ಯತೆಯನ್ನು ಬದಲಾಯಿಸಿಕೊಂಡು ಮೌನ ಕ್ರಾಂತಿಯಿಂದ ಬದುಕುವುದು ಉದ್ಯೋಗಸ್ಥ ಮಹಿಳೆಯರಲ್ಲಿಯೇ ಹೆಚ್ಚಾಗಿ ಕಂಡು ಬರುವುದೆಂಬುದನ್ನು ವರ್ಗ ರದ್ದಾಯಿತು ಕಥೆಯ ಮೂಲಕ ಶಾಂತದೇವಿ ಕಣವಿಯವರು ತಿಳಿಸಿದ್ದಾರೆ.

ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿರುವ ವಿಜಯಾ ತನ್ನ ಮೇಲಾಧಿಕಾರಿಯ ಮಗಳು ನಪಾಸಾದ ಕಾರಣ ಅವನ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಅಂದರೆ ಪಾಸಾಗಲು ಸಾಧ್ಯವಿಲ್ಲದ ದಡ್ಡ ವಿದ್ಯಾರ್ಥಿಯನ್ನು ಹೆಚ್ಚು ಅಂಕಗಳೊಂದಿಗೆ ಪಾಸು ಮಾಡಬೇಕೆಂಬ ಷರತ್ತಿಗೆ ಅವಳು ಒಪ್ಪುವುದಿಲ್ಲ. ಪ್ರಾಮಾಣಿಕವಾಗಿ ತನ್ನ ವೃತ್ತಿ ಕಾರ್ಯನಿರ್ವಹಿಸುತ್ತಾಳೆ. ಇದು ಅವಳ ಬದುಕನ್ನೆ ಸಮಸ್ಯೆಗಳ ಗೂಡಾಗಿ ಪರಿವರ್ತಿಸುತ್ತದೆ. ಆಕೆಯ ಸಂಸಾರದ ಆರ್ಥಿಕ ಹೊರೆ ಹೆಚ್ಚಾಗಿ ಗಂಡ ಮಕ್ಕಳನ್ನು ತೊರೆದು ಬೇರೊಂದು ಊರಿನಲ್ಲಿ ಬದುಕುವಂತಾಗುತ್ತದೆ. ನಂತರ ಆಲೋಚಿಸಿ ಬೆಂಗಳೂರಿಗೆ ಬಂದು ಮುಖ್ಯಾಧಿಕಾರಿಯ ಜೊತೆ ಮಾತನಾಡಿ ತನ್ನ ಸಂಸಾರದ ಜೊತೆ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವರ್ಗವಾಣೆಯಾದ ಸ್ಥಳದಿಂದ ಪುನಃ ತನ್ನ ಕುಟುಂಬ ಇರುವಲ್ಲಿಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಯತ್ನಿಸಿ ಅದರಲ್ಲಿ ಯಶಸ್ಸನ್ನು ಪಡೆಯುತ್ತಾಳೆ. ಆದರೆ ಅಧಿಕಾರಿಯ ನರಿ ಬುದ್ಧಿಯ ಕುತಂತ್ರಕ್ಕೆ ಬಲಿಯಾಗಿ ಕಲ್ಪನೆಗೂ ಮೀರಿದ ಪ್ರಸಂಗದಿಂದಾಗಿ ತತ್ತರಿಸುತ್ತಾಳೆ. ವರ್ಗಾವಣೆ ರದ್ದಾಗುವಂತೆ ಮಾಡುತ್ತೇನೆಂದು ಭರವಸೆ ನೀಡಿದ ಅಧಿಕಾರಿ ಅವಳಿಂದ ಬೇರೇನನ್ನೋ ಬಯಸುತ್ತಿದ್ದಾನೆಂದು ಅರಿಯದ ವಿಜಯ ಆತನ ಅನಿರೀಕ್ಷಿತ ಆಕ್ರಮಣದ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಇವಳ ಅಸಾಹಾಯಕತೆಯನ್ನು ತನ್ನ ಕಾಮತೃಷೆಗಾಗಿ ಬಳಸಿಕೊಳ್ಳುವ

ಅಧಿಕಾರಿಗಳು ಇಂದು ಸಮಾಜದಲ್ಲಿ ಹೆಚ್ಚಾಗಿಯೇ ಈ ವ್ಯವಹಾರಿಕ ಜಗತ್ತಿನಲ್ಲಿ ಇದ್ದಾರೆ ಎಂಬುದು ವ್ಯಕ್ತವಾಗುತ್ತದೆ.

ಸ್ನಾತಕೋತ್ತರ ಪದವಿ ಪಡೆದು 'ಗಗನ ಸಖಿ'ಯಾಗಿ ನೌಕರಿ ಮಾಡುತ್ತಿರುವ ರಚನಾಗೆ ಅವಳ ಕೆಲಸವೇ ವೈವಾಹಿಕ ದಾಂಪತ್ಯ ಬದುಕಿಗೆ ಅಡ್ಡಿಯುಂಟು ಮಾಡುತ್ತದೆಂಬುದನ್ನು ಸಾರಾ ಅಬೂಬಕರ 'ಗಗನ ಸಖಿ' ಕಥೆಯಲ್ಲಿ ನೋಡಬಹುದು. ಇಲ್ಲಿ ರಚನ ಗಗನ ಸಖಿಯಾಗಿ ಕಾರ್ಯನಿರ್ವಹಿಸುತ್ತಿರುವುದೇ ತಪ್ಪು ಅವಳು ಆ ನೌಕರಿಯನ್ನು ಬಿಟ್ಟರೆ ಮಾತ್ರ ಮದುವೆಯಾಗುತ್ತೇನೆ ಎಂದು ಹೇಳುವ ಪುರುಷ'ರು ಕಂಡುಬರುತ್ತಾರೆ. ಆದರೆ ರಚನಾಗೆ ವಿವಾಹಕ್ಕಿಂತ ಉದ್ಯೋಗವೇ ಮುಖ್ಯವೆಂದು ಅದನ್ನೇ ಆಯ್ಕೆ ಮಾಡಿಕೊಳ್ಳುತ್ತಾಳೆ. ಕೆಲದಿನಗಳ ನಂತರ ಅವಳ ವೃತ್ತಿಯನ್ನು ಒಪ್ಪಿಕೊಂಡು ವಿವಾಹ ಮಾಡಿಕೊಂಡ ಅವಳ ಗಂಡ ಕೊನೆಗೆ ಅವಳನ್ನು ಸಂಶಯದ ದೃಷ್ಟಿಯಿಂದ ನೋಡುತ್ತಾನೆ. ಇದರಿಂದ ಬೇಸತ್ತ ರಚನ ಆತನನ್ನು ತೊರೆದು ಸ್ವತಂತ್ರವಾಗಿ ಬದುಕು ನಡೆಸುತ್ತಾಳೆ. ಇಲ್ಲಿ ಹೆಣ್ಣು ಇನ್ನು ಪುರುಷಾಧಿಕಾರದ ಬಂದಿಯಲ್ಲೇ ಬದುಕಬೇಕೆಂಬ ಮನಸ್ಸುಗಳು ಇಂದೂ ಕೂಡ ಇದೆ ಎಂಬುದು ತಿಳಿದು ಬರುತ್ತದೆ.

ಆಧುನಿಕರಣ, ನಗರಿಕರಣ, ಜಾಗತಿಕರಣ ಕೈಗಾರಿಕರಣಗಳ ಪ್ರಭಾವದಿಂದಾಗಿ ಅತಿ ಹೆಚ್ಚು ಉದ್ಯಮ ಸಂಸ್ಥೆಗಳು ಸ್ಥಾಪನೆಗೊಂಡು ಬದುಕು ಯಾಂತ್ರಿಕಗೊಳ್ಳುತ್ತಿದೆ. ಜೀವನ ಶೈಲಿ ಬದಲಾಗುತ್ತಿರುವುದು ಕಾಣುತ್ತಿದ್ದೇವೆ. ಹಾಗೆ ಮಹಿಳೆಯ ಜೀವನವು ಒಂದು ಕಾಲಕ್ಕೆ ಮನೆ, ಮಕ್ಕಳು, ಹೊಲಗೆ ಕೆಲಸಕ್ಕೆಂದು ಸೀಮಿತ ಪರಿಧಿಯಲ್ಲಿದದ್ದು ಇಂದು ವ್ಯವಹಾರಿಕ ಜಗತ್ತಿನಡೆಗೆ ತೆರೆದುಕೊಂಡಿದೆ. ಹಾಗೆ ತಂತ್ರಜ್ಞಾನದ ಕ್ಷೇತ್ರಗಳಗೂ ವಿಸ್ತರಿಸಿಕೊಂಡು ಬೆಳೆಯುತ್ತ ತನ್ನ ಸ್ಥಾನವನ್ನು ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾಳೆ. ಅಡುಗೆ ಮನೆಯಿಂದ ಹೊರನಡೆದು ವಿಭಿನ್ನ ವೃತ್ತಿಗಳಲ್ಲಿ ತನ್ನನ್ನು ಜೊತಡಗಿಸಿಕೊಳ್ಳುತ್ತ ತನ್ನ ಕಾವ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡು ಬೆಳೆಯುತ್ತಿರುವುದನ್ನು ಕಾಣಬಹುದಾಗಿದೆ.

ಕಂಪನಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿರುವ ಗೋಪ'ಣ್ಣನ ಮಗ ಪ್ರಹ್ಲಾದ ಮತ್ತು ಸೊಸೆ ರೇಖಾ ದಿನವಿಡಿ ದುಡಿದು ದಣಿದು ಬರುವ ಅವರಿಬ್ಬರಿಗೆ ಬಿಡುವೇ ಎಂಬುದಿಲ್ಲ. ಆದರೂ ರೇಖಾ ಮನೆಯ ಗೃಹಿಣಿಯ ಕಾರ್ಯನಿರ್ವಹಿಸಲೇಬೇಕು. ತುಂಬು ಗರ್ಭಿಣಿಯಾದರೂ ಕಂಪನಿಯಲ್ಲಿ ರಜೆ ಇಲ್ಲದೇ ದುಡಿಯುವ ಅವಳಿಗೆ ತನ್ನ ವೈಯಕ್ತಿಕ ಬದುಕಿನ ಬಗೆಗೆ ಆಲೋಚಿಸುವುದಕ್ಕೆ ಸಮಯವೇ ಇಲ್ಲದಂತಾಗಿದೆ. ದುಡಿಮೆ ಮತ್ತು ಕೌಟುಂಬಿಕ ನಿರ್ವಹಣೆಯ ಒತ್ತಡದ ಬದುಕು ಅವಳದಾಗಿದೆ. ಇದನ್ನು ಕಂಡ ಗೋಪ'ಣ್ಣ ಪರಲೋಕದಲ್ಲಿರುವ ತನ್ನ ಹೆಂಡತಿಗೆ 'ನೋಡಿದೇನೆ ಸೋಸಿನ? ಹೆಂಗಸರೂ ಲಕ್ಷಗಟ್ಟಲೇ ಸಂಪಾದಿಸೋದು ಕಂಡಿದ್ಯಾ' ಎಂದು ಸ್ವಗತದಲ್ಲಿಯೇ ಮಾತನಾಡಿಕೊಳ್ಳುತ್ತಾನೆ. ಇಲ್ಲಿ ಎಷ್ಟೆ

ಕಷ್ಟವಿದ್ದರೂ ಕೂಡ ಮಹಿಳೆ ಹೊರ ಜಗತ್ತಿಗೆ ಕಾಲಿಟ್ಟು ವ್ಯವಹಾರಿಕ ಬದುಕಿನತ್ತ ನಡೆದಾಗ ಎಲ್ಲವನ್ನು ನಿಭಾಯಿಸುವ ಕೌಶಲ್ಯ ಅವಳಿಗೆ ಕರಗತವಾಗಿರುತ್ತದೇನೋ ಎಂದೆನಿಸುತ್ತದೆ.

ಹಾಗೆ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಜುಳಾ ಎಂಬುವರ ವಯಸ್ಸು ನಲವತ್ತಾದರೂ ಮದುವೆಯಾಗದ ಇವಳಿಗೆ ತನ್ನ ವೈಯಕ್ತಿಕ ಬದುಕಿಗಿಂತ ತನ್ನೆತ್ತಮ್ಮನನ್ನು ಕ್ಷೇಮದಿಂದ ನೋಡಿಕೊಳ್ಳುವುದೇ ಅವಳಿಗೆ ಹೆಚ್ಚಾಗಿರುತ್ತದೆ. ಜೊತೆಗೆ ಉದ್ಯೋಗದ ನಿಮಿತ್ತ ತನ್ನ ವೈಯಕ್ತಿಕ ಬದುಕಿನ ಕಡೆ ಗಮನ ಹರಿಸದೇ ಇರುವ ಜೀವನಕ್ಕೆ ಒಮ್ಮೊಮ್ಮೆ ಅವಳಮ್ಮನೆ ಕೆಂಡ ಮಂಡಲವಾಗುತ್ತಾಳೆ. ಅವಳ ವೈಯಕ್ತಿಕ ಜೀವನದಲ್ಲಿ ಮೂಗು ತೂರಿಸಿ ಸಿಡಿಮಿಡಿಗೊಳ್ಳುತ್ತಾಳೆ. ಮಗಳನ್ನು ಬಿಟ್ಟರೆ ಕೃಷ್ಣವೇಣಮ್ಮನಿಗೆ ಬೇರೆ ಯಾರೂ ಜೊತೆಗಿಲ್ಲ ಆದರೂ ಮಗಳು ತಂದು ಓದುವ ಪುಸ್ತಕಗಳ ಮೇಲೆಯೇ ಅವಳಮ್ಮನಿಗೆ ಕಣ್ಣು ನೆಟ್ಟಿರುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಹೊಂದಾಣಿಕೆ ಮಾಡಿಕೊಂಡು ಸಮಾಜದಲ್ಲಿ ಬದುಕುತ್ತಿರುವ ಅವಳಿಗೆ ತನ್ನೊಲವಿನ ಸಂಗಾತಿ ಇಲ್ಲದೆ ಬದುಕುತ್ತಿರುವ ಭರವಸೆಯ ಹೆಣ್ಣಾಗಿ ಕಂಡುಬರುತ್ತಾಳೆ. ಈ ವ್ಯವಹಾರಿಕ ಜಗತ್ತಿನಲ್ಲಿ ವೈಯಕ್ತಿಕ ಬದುಕಿಗೆ ಗಮನಕೊಡದೇ ಜವಾಬ್ದಾರಿಯಿಂದ ಬದುಕುತ್ತಿರುವ ಹೆಣ್ಣಾಗಿ ಕಂಡು ಬರುವುದನ್ನು 'ಅಪಸ್ವರದಲೊಂದು ಆರ್ತನಾದ' ಎಂಬ ಕಥೆಯಲ್ಲಿ ಕಂಡುಬರುತ್ತದೆ. ಇದು ಪ್ರಸ್ತುತ ಜಗತ್ತಿನಲ್ಲಿ ಜಂಜಾಟದ ಬದುಕಿನಲ್ಲಿರುವ ಹಲವು ಮಹಿಳೆಯರ ಸ್ಥಿತಿಯನ್ನು ತಿಳಿಸುತ್ತದೆ.

ನಗರದ ದೊಡ್ಡ ಕಂಪನಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿರುವ ಶಶಿಯನ್ನು ಹೇಗಾದರೂ ಮಾಡಿ ಆ ಕಂಪನಿಯಿಂದ ತೆಗೆದು ಹಾಕಬೇಕೆಂಬುದು ಮೇಲಾಧಿಕಾರಿಯಾ ಉದ್ದೇಶವಾಗಿರುತ್ತದೆ. ಏಕೆಂದರೆ ಅವನಿಗಿಂತ ಅವಳು ಉನ್ನತ ಹುದ್ದೆಯಲ್ಲಿರುವುದು ಅಥವಾ ಅವಳು ಹೇಳುವ ಸಲಹೆಗಳನ್ನು ಪಡೆದು ಕಂಪನಿ ನಡೆಸುವುದಾಗಲೀ ಆತನಿಗೆ ಇಷ್ಟವಿರುವುದಿಲ್ಲ. ಎಂಬುದು ಅದು ಪುರುಷ ಪ್ರಾಧಿಕಾರದ ಪ್ರಾಧಾನ್ಯತೆಯನ್ನು ಪ್ರತಿನಿಧಿಸುತ್ತದೆ. ಆಗಾಗಿ ಅವಳ ಅಸಾಮಾರ್ಥ್ಯದಿಂದಾಗಿ ಪ್ರಾಜೆಕ್ಟ್ ಕೈತಪ್ಪಿ ಹೋಯಿತು ಕಂಪನಿಗೆ ನಷ್ಟವಾಯಿತು ಎಂದು ಆಪಾದನೆಯೊಂದಿಗೆ ಅವಳನ್ನು ಕೆಲಸದಿಂದ ತೆಗೆದು ಹಾಕುತ್ತಾರೆ. ಆದರೆ ಅದು ಅವಳ ತಪ್ಪಾಗಿರುವುದಿಲ್ಲ. ವಿನಃ ಕಾರಣ ಕಂಪನಿಯಿಂದ ಹೊರ ಹಾಕುವುದು ಅವಳಿಗೆ ಕಸಿವಿಸಿ ಎನಿಸಿದರೂ ಕೂಡ ತನಗೆ ಅದರಿಂದ ಯಾವುದೇ ನಷ್ಟವಿಲ್ಲವೆಂಬಂತೆ ನಡೆದು ಬೇರೊಂದು ಕಡೆ ಕೆಲಸಗಿಟ್ಟಿಸಿಕೊಂಡು ಬದುಕು ಕಟ್ಟಿಕೊಳ್ಳುವಲ್ಲಿ ನಿರತಳಾಗುತ್ತಾಳೆ.

ಶಶಿಕಲಾ ತನ್ನ ಪ್ರತಿಭೆ ಮತ್ತು ಕೌಶಲ್ಯದಿಂದಾಗಿ ತನ್ನೊಂದಿಗಿರುವ ಕೆಲವು ಜೊತೆಗಾರರನ್ನು ವಿದೇಶಕ್ಕೆ ಉದ್ಯೋಗಕ್ಕಾಗಿ ಕಳುಹಿಸಿದ್ದೇವೆ. ಎಂದು ತನ್ನ ಸಹಪಾಠಿಯೊಂದಿಗೆ ಹೇಳಕೊಂಡು ತನಗೂ ತನ್ನ ಸ್ವಸಾಮಾರ್ಥ್ಯದಿಂದ ಕೆಲಸ ಪಡೆದುಕೊಳ್ಳುವುದಕ್ಕೆ ತಿಳಿದಿದೆ ಎಂದು ಹೇಳುತ್ತಾಳೆ ಹೆಣ್ಣು ಅಬಲೆಯಲ್ಲ ಸಬಲೆ ಅವಳಿಗೂ ಚಂದದ ಜೀವನ ನಡೆಸುವುದಕ್ಕೆ ಹಲವು ದಾರಿಗಳನ್ನು ಕಂಡುಕೊಂಡಿರುತ್ತಾಳೆ ಪುರುಷನಷ್ಟೆ ವ್ಯವಹಾರಿಕ ಜಗತ್ತಿನಲ್ಲಿ ಚಾಣಕ್ಷ್ಯತನದಿಂದ ತನ್ನ ಬೌದ್ಧಿಕ

ಕಸರತ್ತಿನಿಂದ ಉದ್ಯೋಗ ಪಡೆಯುವುದು ತಿಳಿದಿದೆ ಎಂಬುದನ್ನು ಹೆಡ್ ಹಂಟರ್ ಕಥೆಯಲ್ಲಿ ವಸುಧೇಂದ್ರ ಅವರು ತಿಳಿಯಪಡಿಸಿದ್ದಾರೆ.

ಜಾಗತೀಕರಣದ ಸರಕು ಸಂಸ್ಕೃತಿಯಲ್ಲಿ ಮಹಿಳೆಯನ್ನು ಮಾರುಕಟ್ಟೆಯ ಮೌಲ್ಯದ ಮೂಲಕವೇ ನಿರ್ಧರಿಸುತ್ತದೆ. ಅವಳ ದುಡಿಮೆ ಅಧಿಕೃತತೆ ಪಡೆಯುವುದು ಕೂಡ ಇದರ ಮೂಲಕವೇ ಆಗಿದೆ. ಇಲ್ಲಿ ಹೆಣ್ಣು ಮಾರಾಟದ ವಸ್ತು ಅಥವಾ ಕೊಳ್ಳುವ ಸರಕು ಆಗಿರುವುದು ಈ ಸರಕು ಸಂಸ್ಕೃತಿಯ ಬಹುದೊಡ್ಡ ದುರಂತವೇ ಆಗಿದಂತಿದೆ. ಆಧುನೀಕರಣ ಉದಾರೀಕರಣ ಖಾಸಗೀಕರಣ ಜಾಗತೀಕರಣ ಪ್ರಕ್ರಿಯಿಂದಾಗಿ ಅವಳ ದುಡಿಮೆಯಲ್ಲಿಯೂ ಕೂಡ ಪರಿಣಾಮ ಬೀರಿದೆ. ಅವಳು ಹೊರಗೆ ಹೋಗಿ ದುಡಿಯುವುದು ಅವಶ್ಯಕವಿದ್ದರೂ ಅಲ್ಲಿ ಹಲವಾರು ರೀತಿಯ ನೋವು ಹಿಂಸೆ, ಮಾನಸಿಕ ಒತ್ತಡ, ದೌರ್ಜನ್ಯ ಕಿರುಕುಳಗಳ ಸಹಿಸಬೇಕಾಗಿದೆ. ಕಡಿಮೆ ವೇತನಕ್ಕೆ ಕೆಲಸಮಾಡುವುದು ಕೆಲಸದಲ್ಲಿ ಕಿರುಕುಳಗಳ ಸಹಿಸಬೇಕಾಗಿದೆ. ಕೆಲಸದಲ್ಲಿ ಭದ್ರತೆ ಇಲ್ಲದಿರುವುದು ಮತ್ತು ರಕ್ಷಣೆ ಎಂಬುದು ಖಾಸಗಿ ಕಂಪನಿಗಳಲ್ಲಿ ಮಾಯವಾಗುತ್ತಿರುವುದು ಕಂಡುಬರುತ್ತದೆ. ಕಾಲ್ ಸೆಂಟರ್‌ಗಳಲ್ಲಿ ಬಿ.ಪಿ.ಓ ಕಂಪನಿಗಳಲ್ಲಿ ವಿಶ್ರಾಂತಿ ಇಲ್ಲದೇ ದುಡಿಯುತ್ತಿರುವ ಮಹಿಳೆಯರು ಮಾನಸಿಕ ಒತ್ತಡಗಳಿಂದ ಜರ್ಜರಿತರಾಗಿರುತ್ತಾರೆ. ಮನೆಯಿಂದ ಹೊರ ಜಗತ್ತಿಗೆ ಬಂದು ಮಹಿಳೆ ದುಡಿಯುತ್ತಿರುವುದರಿಂದ ಕುಟುಂಬಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತಿದೆ. ಅವಳ ದುಡಿಮೆಯಿಂದ ನೆಮ್ಮದಿ ಮತ್ತು ಉತ್ತಮ ಜೀವನ ನಡೆಸುವ ಎಷ್ಟೋ ಮನ ಮನೆಗಳು ಇವೆ. ಇದರಿಂದಾಗಿ ಆರ್ಥಿಕ ಸ್ವಾವಲಂಬಿಯಾಗಿ ಬದುಕುತ್ತಿರುವುದರಿಂದ ಉತ್ತಮ ಸ್ಥಾನ ಮಾನಗಳು ಲಭಿಸುತ್ತಿವೆ. ಇಷ್ಟೆಲ್ಲ  ಕಷ್ಟ ನಷ್ಟ ಸುಖಗಳೊಂದಿಗೆ ಬದುಕುತ್ತಿರುವ ಮಹಿಳೆಗೆ ಖಾಸಗಿಯ ಕಂಪನಿಯಲ್ಲಿ ದುಡಿಯುವವರಿಗೆ ಹೆರಿಗೆ ಸೌಲಭ್ಯದ ರಜೆ. ಪಿಂಚಣಿ ಇಲ್ಲದೆ ದುಡಿಮೆಯಲ್ಲಿ ನಿರತಳಾಗಿ ಬದುಕುತ್ತಿದ್ದಾಳೆ. ಅವಳ ಆರೋಗ್ಯದ ಪ್ರಮಾಣದಲ್ಲಿ ಕುಸಿಯುತ್ತಿದೆ. ಕುಟುಂಬದ ಹೊಣೆಗಾರಿಕೆ ಹೊತ್ತ ಮಹಿಳೆ ಮದುವೆ ಇಲ್ಲದೆ ಕೌಟುಂಬಿಕ ಜೀವನದಿಂದ ದೂರವಾಗಿ ಬದುಕುವಂತಹ ಆಲೋಚನೆಯನ್ನು ಮಾಡಿ ಹಾಗೆ ಬದುಕುತ್ತಿರುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಕಂಪನಿಗಳಲ್ಲಿ ಕೆಲಸ ಮಾಡುವ ಎಷ್ಟೋ ಮಹಿಳೆಯರು ನಮ್ಮ ಕಣ್ಮುಂದೆ ಇರುವುದನ್ನು ಗಮನಿಸಬಹುದಾಗಿದೆ.

## ಅಧ್ಯಯನಕ್ಕೆ ಬಳಸಿರುವ ಗ್ರಂಥಗಳು

1. ರಾಚಪ್ಪಾಜಿ.ಎಂ, ಡಾ.ಎಸ್.ನಾಗರಾಜು, **ಮಹಿಳಾ ವಿಮೋಚನಾ ಹೆಜ್ಜೆಗಳು,** ಉನ್ನತಿ ಪ್ರಕಾಶನ, ಮೈಸೂರು, 2015
2. **ಲಿಂಗ ಅಸಮಾನತೆಯ ಸೂಚ್ಯಂಕ,**ಮಾನವ ಅಭಿವೃದ್ಧಿ ವರದಿಗಳು,2021,ಅಕ್ಟೋಬರ್, 29
3. ಸುಜಾತ, **ಮಹಿಳೆಯರ ಹಿನ್ನೆಲೆ ಮತ್ತು ದೃಷ್ಟಿಕೋನ,** ಇನ್ಫೋಚೆಂಜ್ ಇಂಡಿಯಾ, ನ್ಯೂ ದೆಹಲಿ, 2008

4. ರಂಜಿತ್ ಕುಮಾರ್ ಬರ್ಮನ್, **ಭಾರತದಲ್ಲಿ ಮಹಿಳೆಯರು,** ಅಭಿಜಿತ್ ಪಬ್ಲೀಕೇಷನ್ಸ್, ನ್ಯೂ ದೆಹಲಿ, 2020

5. ಅರುಣ್ ಆರ್.ಕುಂಬಾರೆ, **ಭಾರತದ ಮಹಿಳೆಯರು: ವೇದ ಕಾಲದಿಂದಲೂ ಅವರ ಸ್ಥಿತಿ,** ಅಲ್ಟೈನೆರ್ಟಿವ್, ನ್ಯೂಯಾರ್ಕ್, 2008

6. ಖುಷ್ವಂತ್ ಸಿಂಗ್, **ಕಂಪನಿಯಲ್ಲಿ ಮಹಿಳೆಯರು,** ವೈಕಿಂಗ್ ಪಬ್ಲೀಕೇಷನ್ಸ್, ನ್ಯೂ ದೆಹಲಿ, 1999